**ಸಿ.ಸಿ. ನಂಬ್ರಃ 1828/2014** **CW-1**

ದಿನಾಂಕಃ 06.07.2024

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಜೆ ಎಸ್ ರವರ ಪರವಾಗಿ ಬಿ.ಆರ್.ಎನ್ ರವರಿಂದಃ**

ನಮ್ಮ ನಡುವೆ ಯಾವುದೇ ಜಾಗದ ಗಲಾಟೆ ಇಲ್ಲ. ಮದುವೆ ವಿಚಾರದಲ್ಲಿ ಗಲಾಟೆಯಾಗಿರುತ್ತದೆ. ನನ್ನ ಮಕ್ಕಳ ಮದುವೆಯಾಗಬಾರದೆಂದು ಗಲಾಟೆ ಮಾಡುತ್ತಿದ್ದರು. ಈ ಹಿಂದೆಯೂ ಈ ರೀತಿ ಗಲಾಟೆಯಾಗಿರುತ್ತದೆ. ನಮ್ಮ ಮನೆಯ ಸುತ್ತಮುತ್ತ ನನ್ನ, ಆರೋಪಿ, ಶಿವ ಭಂಡಾರಿಯವರ ಮನೆ ಇರುತ್ತದೆ. ಮೋಹನದಾಸ್ ರವರ ಮನೆ ಸ್ವಲ್ಪ ದೂರದಲ್ಲಿ ಇರುತ್ತದೆ. ಗಲಾಟೆಯಾಗುವಾಗ ನನಗೆ 61 ವರ್ಷ ಆಗಿರುತ್ತದೆ. ನಮ್ಮಿಬ್ಬರ ಮನೆಗೆ ಹೋಗಲು ಒಂದೇ ರಸ್ತೆ ಇರುತ್ತದೆ. ಪಾಂಡುರವರ ಲಾರಿಯಲ್ಲಿ ಮಣ್ಣನ್ನು ನಮ್ಮ ಮನೆಗೆ ತಂದು ಹಾಕಿರುತ್ತೇವೆ. ಆಗ ಮಧ್ಯಾಹ್ನ 1-15 ಗಂಟೆಯಾಗಿರುತ್ತದೆ. ಆ ದಿನ ನನ್ನೊಂದಿಗೆ ಚಾಸಾ-2 ರಿಂದ 4ರವರು ಇದ್ದರು. ವಿದ್ಯುತ್ ಕಂಬಕ್ಕೆ ನಾವು ಮಣ್ಣು ಸಾಗಿಸುತ್ತಿದ್ದ ಲಾರಿ ತಾಗಿದ ಕಾರಣ ಗಲಾಟೆಯಾಗಿರುತ್ತದೆ. ಸಾಕ್ಷಿ ಮುಂದುವರೆದು ತಾಗಿಲ್ಲ ಎಂದು ನುಡಿದಿರುತ್ತಾರೆ. ಆದರೆ ತಾಗುತ್ತದೆ ಎಂದು ಗಲಾಟೆ ಮಾಡಿರುತ್ತಾರೆ.

ನಾಲ್ಕು ಜನರು ನನಗೆ ಹಲ್ಲೆ ಮಾಡಿರುತ್ತಾರೆ. ಕಣ್ಣಿಗೆ ಕಾಣುವಂತಹ ಗಾಯಗಳು ನನಗೆ ಆಗಿಲ್ಲ. ಮುಮಾ1 ರಿಂದ ಒಬ್ಬರೇ ನನ್ನ ಕೈಗೆ ಹೊಡೆದಿರುತ್ತಾರೆ. ಚಿಕಿತ್ಸೆಗಾಗಿ ಮೊದಲಿಗೆ ಕುಂದಾಪುರದ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ಉಪಕರಣಗಳು ಇಲ್ಲದ ಕಾರಣ ಕುಂದಾಪುರದ ಮಂಜುನಾಥ ಆಸ್ಪತ್ರೆಗೆ ಹೋಗಿರುತ್ತೇವೆ. ಮಧ್ಯಾಹ್ನ 1-30ಕ್ಕೆ ಕುಂದಾಪುರದ ಮಂಜುನಾಥ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಪ್ರಾಥಮಿಕ ಚಿಕಿತ್ಸೆ ನೀಡಿ ಅನಂತರದಲ್ಲಿ ನನ್ನನ್ನು ಮುಂದಿನ ಚಿಕಿತ್ಸೆಗೆ ಉಪಕರಣಗಳು ಇಲ್ಲ ಎಂದು ವೈದ್ಯರು ತಿಳಿಸಿ ಕಳುಹಿಸಿರುತ್ತಾರೆ. ಆ ವೇಳೆ ನನ್ನೊಂದಿಗೆ ಚಾಸಾ-2 ಮತ್ತು 3ರವರು ಇದ್ದರು. ಅವರಿಬ್ಬರು ವಿದ್ಯಾವಂತರು.

ಈ ಮೇಲೆ ಹೇಳಿದಂತೆ ಶಿವಕುಮಾರ್ ಎಂಬ ವೈದ್ಯರು ತಿಳಿಸಿರುತ್ತಾರೆ. ಆ ರೀತಿ ನಾನು ಸರಕಾರಿ ಆಸ್ಪತ್ರೆಯಿಂದ ಬಿಡುಗಡೆಯಾಗುವ ವೇಳೆಗೆ ನೀಡಿದ ದೃಡೀಕರಣ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ಸರಕಾರಿ ಆಸ್ಪತ್ರೆಯಲ್ಲಿ ಚುಚ್ಚುಮದ್ದು ಮಾತ್ರ ಪಡೆದಿರುತ್ತೇನೆ. ಮಂಜುನಾಥ ಆಸ್ಪತ್ರೆಯಲ್ಲೂ ಅದೇ ಶಿವಕುಮಾ} ವೈದ್ಯರು ಚಿಕಿತ್ಸೆ ನೀಡಿರುತ್ತಾರೆ. ಅಲ್ಲಿ 9 ರಿಂದ 11ನೇ ತಾರೀಕಿನವರೆಗೂ ಇದ್ದೆ. ಆ ವೇಳೆಗೆ ಎಕ್ಸರೇ ಯನ್ನು ತೆಗೆಸಿರುತ್ತಾರೆ. ಚಾಸಾ-2 ದೂರು ನೀಡಿರುತ್ತಾರೆ. ಆ ದಿನ ಪೊಲೀಸರು ಸರಕಾರಿ ಆಸ್ಪತ್ರೆಯಲ್ಲಿ ವಿಚಾರಣೆ ಮಾಡಿರುತ್ತಾರೆ. ಆ ಸಮಯದಲ್ಲಿ ಎದೆಗೆ, ಭುಜಕ್ಕೆ ಹೊಟ್ಟೆಗೆ ನೋವಾಗಿದ್ದ ಬಗ್ಗೆ ತಿಳಿಸಿರುತ್ತೇನೆ. ಗಾಯಗಳಿಗೆ ಯಾವುದೇ ಬ್ಯಾಂಡೇಜ್ ಹಾಕಿರುವುದಿಲ್ಲ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಪೊಲೀಸರು ನನ್ನನ್ನು ಮತ್ತೆ ವಿಚಾರಣೆ ಮಾಡಿಲ್ಲ. ಮೊದಲಿಗೆ ಸರಕಾರಿ ಆಸ್ಪತ್ರೆಯಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡುವಾಗ ಚಾಸಾ-2 ಮತ್ತು 3ರವರು ಅಲ್ಲೇ ಇದ್ದರು.

ಚಾಸಾ-2ರವರು ದೂರನ್ನು ಯಾವಾಗ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಘಟನೆ ನಡೆಯುವುದನ್ನು ಅಕ್ಕಪಕ್ಕದ ಮನೆಯವರು ನೋಡಲು ಬಂದಿರಲಿಲ್ಲ. ಇದೇ ವಿಚಾರದಲ್ಲಿ ನಾನು ನನ್ನ ಗಂಡ, ಚಾಸಾ-2 ಮತ್ತು 3ರವರು ಆರೋಪಿತರ ಮೇಲೆ ನಾವು ಹಲ್ಲೆ ಮಾಡಿದ್ದೇವೆ ಎಂದು **ಮೊಕದ್ದಮೆ ಸಂಖ್ಯೆ 119/2016** ರಂತೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ನನ್ನನ್ನು ವಿಚಾರಣೆ ಮಾಡಿಲ್ಲ.

ನಾನು ಕೃಷಿ ಮತ್ತು ಕೂಲಿ ಕೆಲಸ ಮಾಡುತ್ತೇನೆ. ನಾನು ಘಟನೆಯ ವಾರದ ಮುಂಚೆ ಆ ರೀತಿ ಕೆಲಸ ಮಾಡುವಾಗ ಬಿದ್ದು ಗಾಯ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅದನ್ನು ದುರಪಯೋಗಪಡಿಸಿಕೊಂಡು ಆರೋಪಿತರ ಮೇಲೆ ನಾನು ನನ್ನ ಕುಟುಂಬದವರು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸರಕಾರಿ ಆಸ್ಪತ್ರೆಯನ್ನು ಹೊರತುಪಡಿಸಿ ಬೇರೆ ಎಲ್ಲೂ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ವೈಶಮ್ಯದಿಂದ ನಾನು ಮತ್ತು ನನ್ನ ಕುಟುಂಬಸ್ಥರು ಆರೋಪಿತರ ವಿರುದ್ದ ಹಲ್ಲೆ ಮಾಡಿ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ನಾನು ಮಂಜುನಾಥ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ಮುಮಾ1 ಶಾಮಿಯಾನಕ್ಕೆ ಹಾಕುವ ಕಂಬ ಎಂದರೆ ಸರಿ. ಅದನ್ನು ಕಂಬ ಎಂದು ಕರೆಯುತ್ತಾರೆ ಎಂದರೆ ಸರಿ. ಕಂಬ ಮತ್ತು ರಾಡ್ ಎರಡೂ ಬೇರೆ ಬೇರೆ ಎಂದರೆ ಸರಿ. ಈ ಪ್ರಕರಣದಲ್ಲಿ ಒತ್ತಡ ಹೇರಲು ರಾಡ್ ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಮುಮಾ1ಕ್ಕೂ ಈ ಪ್ರಕರಣಕ್ಕೂ

ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ಸಂಭವಿಸಿಲ್ಲ ಎಂದರೆ ಸರಿಯಲ್ಲ. ನಿಪಿ-1ನ್ನು ಪೊಲೀಸರು ನನಗೆ ಓದಿ ಹೇಳಿಲ್ಲ ಆದ್ದರಿಂದ ಅದರಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ ಎಂದರೆ ಸರಿ. ಚಾಸಾ-2 ಮತ್ತು 3ರವರು ನನ್ನನ್ನು ಬಳಸಿಕೊಂಡು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ